ಬಂದು ನಮಗೆ ಕೊಡುತ್ತಾರೆ. ಆದರ ಬದಲಾಗಿ ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿಯೇ ಮಾರಾಟ ಮಾಡತಕ್ಕ ವ್ಯವಸ್ಥೆಯನ್ನು ಏತಕ್ಕೆ ಮಾಡಬಾರದು ? ಆಂಧ್ರಪ್ರದೇಶದಲ್ಲಿ ಈ ವ್ಯವಸ್ಥೆಯಿದೆ. ಇದರಿಂದ ಸರ್ಕಾರಕ್ಕೆ ಹಣ ಬರುತ್ತದೆ. ನೇರವಾಗಿ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಮಾರಾಟ ಮಾಡತಕ್ಕ ವ್ಯವಸ್ಥೆಯನ್ನು ಏತಕ್ಕೆ ಮಾಡಬಾರದು ?

SRI M. RAJASHEKHARA MURTHY:– That is a new suggestion. It will be examined.

ಶ್ರೀ ಎನ್. ಹುಚ್ಚಮಾಸ್ತಿಗೌಡ:– ಮಾನ್ಯ ಅಧ್ಯಕ್ಷರೇ, ಪ್ರಶ್ನೆ 132 (1025) ನನಗೆ ನೇರವಾಗಿ ಸಂಬಂಧಪಟ್ಟಂಥ ಪ್ರಶ್ನೆ ಅಲ್ಲ. ತೋಟಗಾರಿಕೆ ಇಲಾಖೆಯ ಮುಖಾಂತರ ಅವರಿಗೆ ಉತ್ತರ ಕೊಡಬೇಕಾಗುತ್ತದೆ.

ಅಧ್ಯಕ್ಷರು:– ಇದನ್ನು ಹೆಲ್ಡ್ ಓವರ್ ಮಾಡುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ:– ತೋಟಗಾರಿಕೆ ಮಂತ್ರಿಗಳು ಇಲ್ಲಿ ಇದ್ದಾರೆ. ಉತ್ತರ ಬಂದಿದ್ದರೆ ಅವರು ಕೊಡಲಿ. Any Minister can reply. Collective responsibility is there.

ಅಧ್ಯಕ್ಷರು:– ಇದು ಟ್ರಾನ್ಸ್‌ಫರ್ ಆಗಿದೆ. ತೋಟಗಾರಿಕೆ ಮಂತ್ರಿಗಳು ಬಂದಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಮ್ಕಿ ಹಕ್ಕು ಊರ್ಜಿತ

133 (1040): ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ)

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತಲೆತಲಾಂತರದಿಂದ ಕುಮ್ಕಿ ಹಕ್ಕು ಇರುವುದು ಸರ್ಕಾರದ ಗಮನದಲ್ಲಿದೆಯೇ ?

ಆ) ಇತ್ತೀಚೆಗೆ ಸರ್ಕಾರ ಕುಮ್ಕಿ ಹಕ್ಕು ರದ್ದು ಮಾಡಿದೆಯೆ ? ಇದರಿಂದ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಸರ್ಕಾರ ರೈತರಿಗೆ ಕುಮ್ಕಿ ಹಕ್ಕು ಊರ್ಜಿತಗೊಳಿಸಲು ಕ್ರಮ ತೆಗೆದುಕೊಳ್ಳುವುದೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಹೌದು

ಆ) ಇಲ್ಲ
ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಶ್ರೀ ಎ. ರುಕ್ಮಯ್ಯ ಪೂಜಾರಿ:– ಮಾನ್ಯ ಅಧ್ಯಕ್ಷರೇ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಮ್ಕಿ ಹಕ್ಕು ಪದ್ಧತಿ ಹಿಂದಿನಿಂದ ನಡೆದುಕೊಂಡು ಬಂದಿದೆ. ರೈತರು ಕೃಷಿಗಾಗಿ ಸೊಪ್ಪು ಸೆದೆಗಾಗಿ ಈ ಜಮೀನನ್ನು ಉಪಯೋಗಿಸಿಕೊಳ್ಳುತ್ತಾರೆ. ಇತ್ತೀಚೆಗೆ ರೆವಿನ್ಯೂ ಅಧಿಕಾರಿಗಳು, ಗ್ರಾಮಲೆಕ್ಕಿಗರು, ತಹಸೀಲ್ದಾರ್‌ರು, ಸಂಬಂಧಪಟ್ಟ ಅಧಿಕಾರಿಗಳು ಕುಮ್ಕಿ ಹಕ್ಕು ರದ್ದಾಗಿದೆ ಎಂದು ಹೇಳುತ್ತಿದ್ದಾರೆ ಮತ್ತು ತೊಂದರೆಯನ್ನು ಕೊಡುತ್ತಿದ್ದಾರೆ. ಆದರೆ ಇಲ್ಲಿ ಕುಮ್ಕಿ ಹಕ್ಕು ರದ್ದಾಗಿಲ್ಲವೆಂದು ನನಗೆ ಉತ್ತರ

ಕೊಟ್ಟಿದ್ದಾರೆ. ಈ ಬಗ್ಗೆ ಎಷ್ಟೋ ಜನರು ಹೈಕೋರ್ಟಿಗೆ ಹೋಗಿ ತಡೆಯಾಜ್ಞೆಯನ್ನು ತಂದಿದ್ದಾರೆ. ಕುಮ್ಕಿ ಹಕ್ಕು ರದ್ದಾಗದಿದ್ದರೆ ಅವರು ಸ್ವೇ ತರುವ ಅವಶ್ಯಕತೆ ಏನಿರುತ್ತಿತ್ತು? ಆದ್ದರಿಂದ ಕುಮ್ಕಿ ಹಕ್ಕು ಊರ್ಜಿತ ಇದೆಯೇ? ಇದರ ಬಗ್ಗೆ ಸರಿಯಾದ ಮಾಹಿತಿಯನ್ನು ಕೊಡಬೇಕು.

ಶ್ರೀ ಎಂ. ರಾಜಶೇಖರ ಮೂರ್ತಿ:– ಕುಮ್ಕಿ ಹಕ್ಕು ರದ್ದಾಗಿಲ್ಲ. ಅವರಿಗೆ ಸರಿಯಾದ ಮಾಹಿತಿ ದೊರೆತಿಲ್ಲವೆಂದು ಕಾಣುತ್ತದೆ. ಅಧಿಕಾರಿಗಳು ಇದನ್ನು ದುರುಪಯೋಗಪಡಿಸಿಕೊಂಡು ಜನರಿಗೆ ತೊಂದರೆ ಕೊಡುತ್ತಿದ್ದಾರೆಂದು ಹೇಳುತ್ತಿದ್ದಾರೆ. ಮತ್ತೆ ಅವರಿಗೆ ಸರ್ಕ್ಯುಲರನ್ನು ಇಶ್ಯೂ ಮಾಡಿ ಇದು ರದ್ದಾಗಿಲ್ಲವೆಂದು ಅಧಿಕಾರಿಗಳಿಗೆ ತಿಳಿಸುತ್ತೇವೆ. ಯಾವುದೇ ತೊಂದರೆ ಕೊಡಬೇಡಿ ಎಂದು ಹೇಳುತ್ತೇನೆ.

ಶ್ರೀ ಎ. ರುಕ್ಮಯ್ಯ ಪೂಜಾರಿ:– ಸರ್ಕಾರ ಯಾವುದೇ ದೃಷ್ಟಿಯಿಂದ ಕೂಡ ಈ ಕುಮ್ಕಿ ಹಕ್ಕನ್ನು ರದ್ದು ಮಾಡಬಾರದು. ಇದು ಬಹಳ ಹಿಂದಿನಿಂದ ರೈತರಿಗೆ ಸಿಗುತ್ತಿರುವ ಸವಲತ್ತು. ಅದನ್ನು ರದ್ದು ಮಾಡಿದರೆ ರೈತರಿಗೆ ಕೃಷಿಗೆ ಸೊಪ್ಪು, ಸೆದೆ ಉಪಯೋಗಿಸಲಿಕ್ಕೆ ತುಂಬಾ ತೊಂದರೆಯಾಗುತ್ತದೆ. ಏಕೆಂದರೆ ಅವರಿಗೆ ಬೇರೆ ಕಾಡು ಸಿಗುವುದಿಲ್ಲ. ಈಗ ರಸಗೊಬ್ಬರದ ಬೆಲೆ ಜಾಸ್ತಿಯಾಗಿದೆ. ಸೊಪ್ಪು ಸಿಗದೇ ಇದ್ದರೆ ರೈತ ಕೃಷಿ ಮಾಡಲು ಕಷ್ಟವಾಗುತ್ತದೆ. ಆದ್ದರಿಂದ ನಮ್ಮ ಜಿಲ್ಲೆಯಲ್ಲಿ ಯಾವ ಕಾರಣಕ್ಕೂ ಕುಮ್ಕಿ ಹಕ್ಕನ್ನು ರದ್ದು ಮಾಡಬಾರದೆಂದು ಹೇಳುತ್ತೇನೆ.

ಶ್ರೀ ಎಂ. ರಾಜಶೇಖರ ಮೂರ್ತಿ:– ಇದನ್ನು ರದ್ದುಪಡಿಸಬೇಕೇ, ರದ್ದುಪಡಿಸಬಾರದೇ ಎಂದು 1980ರಿಂದ ಚರ್ಚೆ ನಡೆಯುತ್ತಿದೆ. 1980ರಲ್ಲಿ ಒಂದು ಕ್ಯಾಬಿನೆಟ್ ಸಬ್‌ಕಮಿಟಿ ಆಯಿತು. ಅವರು ಇದನ್ನು ಅಬಾಲಿಶ್ ಮಾಡಬಹುದು ಎಂದು ಶಿಫಾರಸ್ಸು ಮಾಡಿದರು. ಅಲ್ಲಿಗೆ ಆ ಸರ್ಕಾರ ಹೋಯಿತು. 1985ರಲ್ಲಿ ಮತ್ತೆ ಒಂದು ಸಬ್‌ಕಮಿಟಿ ಆಯಿತು. ಆ ಸರ್ಕಾರ ಹೋಯಿತು ಮತ್ತು ಅದೂ ನಿಂತುಹೋಯಿತು. 1989ರಲ್ಲಿ ಮತ್ತೆ ಸಬ್‌ಕಮಿಟಿ ಆಯಿತು. ಆ ಸರ್ಕಾರ ಹೋಯಿತು. ಅದು ನಿಂತುಹೋಯಿತು. 1992ರಲ್ಲಿ ಇನ್ನೊಂದು ಸಬ್‌ಕಮಿಟಿ ಆಯಿತು. ಆ ಸರ್ಕಾರ ಹೋಯಿತು ಮತ್ತು ಅದೂ ನಿಂತುಹೋಯಿತು. ಆದ್ದರಿಂದ ಇದರ ಬಗ್ಗೆ ಆಖೈರು ತೀರ್ಮಾನ ತೆಗೆದುಕೊಂಡಿಲ್ಲ. ಇದು ರದ್ದಾಗಿಲ್ಲ.

ಶ್ರೀ ಎ. ರುಕ್ಮಯ್ಯ ಪೂಜಾರಿ:– ರೈತರಿಗೆ ತೊಂದರೆಯಾಗದ ರೀತಿಯಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ಇದರ ಬಗ್ಗೆ ತಿಳಿಸಿ.

ಶ್ರೀ ವಿನಯಕುಮಾರ್ ಸೊರಕೆ:– ಭೂ ಮಸೂದೆಯಲ್ಲಿ ಭೂಮಿ ಸಿಗದೇ ಇರುವ ರೈತರಿದ್ದಾರೆ. ಅವರಿಗೆ ಸಂಬಂಧಪಟ್ಟಂಥ ಕುಮ್ಕಿ ಹಕ್ಕನ್ನು ಭೂ ಮಸೂದೆ ಮುಖಾಂತರ ಕೊಟ್ಟಿಲ್ಲ. ಹಾಗಾಗಿ ಭೂ ಮಸೂದೆಯಲ್ಲಿ, ಭೂಮಿ ಸಿಗದೇ ಇರುವ ರೈತರಿಗೆ ಕುಮ್ಕಿ ಹಕ್ಕು ಇಲ್ಲ ಎನ್ನುವ ಡೈರೆಕ್ಷನ್ ಸರ್ಕಾರದಿಂದ ಹೋಗಿದೆ. ಈಗ ನಮಗೆ ಸಮಸ್ಯೆ ಬಂದಿರುವುದು ಅಕ್ರಮ ಸಕ್ರಮದ ಕೆಲಸಕಾರ್ಯಗಳಲ್ಲಿ, ಪಟ್ಟಾ ಕೊಡುವುದಕ್ಕೆ ಅರ್ಜಿಗಳು ಬಂದಿದ್ದು, ಅದರಲ್ಲಿ ಪಟ್ಟಾ ಕೊಡುವುದನ್ನು ಈ ಸಮಿತಿಗಳಲ್ಲಿ, ನಾವು ಮಾಡುತ್ತಾ ಇದ್ದೇವೆ. ಅದೇ ರೀತಿ ಕುಮ್ಕಿದಾರನ ಒಪ್ಪಿಗೆ ಇದ್ದರೆ ಆ ಒಂದು ಜಾಗದಲ್ಲಿ ಹತ್ತು–ಮೂವತ್ತು ವರ್ಷಗಳಿಂದ ಇದ್ದು ಕೃಷಿ ಮಾಡಿದವರಿಗೆ ಹಕ್ಕುಪತ್ರ ಕೊಡುವ ರೀತಿಯಲ್ಲಿ ಕೂಡ ಮಾನ್ಯ ಸಚಿವರು ಆಶ್ವಾಸನೆ ಕೊಡಬೇಕು. ಹಾಗೆಯೇ ಪಟ್ಟಾದಾರರಿಗೆ ಕುಮ್ಕಿ ಹಕ್ಕನ್ನು ಉಳಿಸುವಂಥ ರೀತಿಯಲ್ಲಿ ಕಾರ್ಯ ಕ್ರಮ ಹಮ್ಮಿಕೊಳ್ಳಬೇಕೆಂದು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

SRI M. RAJASHEKHARA MURTHY:– It will be looked into.

ಅಧ್ಯಕ್ಷರು:– ವಾಟಾಳ್ ನಾಗರಾಜ್‌ರವರೇ, ನಿಮ್ಮ 134 (1080)ನೇ ಪ್ರಶ್ನೆಗೆ ಉತ್ತರ ಬಂದಿಲ್ಲ. ಅದನ್ನು ನಾನು ಮುಂದಿನವಾರ ತೆಗೆದುಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ನನ್ನ ಪ್ರಶ್ನೆಗಿಂತ ಹೆಚ್ಚಾಗಿ ಇಲ್ಲಿ ಒಬ್ಬರು ಬಂದು ನನ್ನನ್ನು ಹೆದರಿಸಿ ಹೋಗಿದ್ದಾರೆ. ಅದನ್ನು ಆಮೇಲೆ ನಾನು ಎತ್ತುತ್ತೇನೆ. ಇಲ್ಲಿ ಒಬ್ಬರು ಬಂದು ನನಗೆ ಹೆದರಿಕೆ ಹಾಕಿದ್ದಾರೆ. ತಾವು ನನಗೆ ಅವಕಾಶ ಕೊಡಬೇಕು. ಇಲ್ಲದಿದ್ದರೆ ನಾನು ರಾಜೀನಾಮೆ ಬೇಕಾದರೆ ಕೊಡುತ್ತೇನೆ. ತಮಗೆ ಈ ಸದನದಲ್ಲಿ ನಮಗೆ ರಕ್ಷಣೆ ಕೊಡುವುದಕ್ಕೆ ಆಗಿಲ್ಲವೆಂದರೆ ನಾನು ಈ ಸದನವನ್ನು ಬಿಟ್ಟು ಹೋಗುತ್ತೇನೆ. ನಾನು 1967ನೇ ಇಸವಿಯಿಂದ ಈ ಸದನದಲ್ಲಿ ಒಬ್ಬ ಸದಸ್ಯನಾಗಿದ್ದೇನೆ. ಇಲ್ಲಿ ಯಾರೋ ಮತ್ತೊಬ್ಬ ಸದಸ್ಯರು ಬಂದು ನನಗೆ ಹುಚ್ಚುಹುಚ್ಚಾಗಿ ಮಾತನಾಡತಕ್ಕಂಥ ಬೇಜವಾಬ್ದಾರಿತನಕ್ಕೆ ಹೋಗಬಾರದು. ಆಮೇಲೆ ಪ್ರಶ್ನೋತ್ತರವಾದ ನಂತರ ತಾವು ನನಗೆ ಅವಕಾಶ ಕೊಡಬೇಕು.

ಶ್ರೀ ಕೆ. ಎಸ್. ಈಶ್ವರಪ್ಪ:– ಇದು ಶಾಸಕರ ಮರ್ಯಾದೆಯ ಪ್ರಶ್ನೆಯ ಜೊತೆಗೆ ಅವರ ಹಕ್ಕಿನ ಪ್ರಶ್ನೆ ಕೂಡ ಇದೆ. ಈ ರೀತಿ ಹೆದರಿಕೆ, ಬೆದರಿಕೆ ಹಾಕಿದರೆ ನಾವು ಇಲ್ಲಿ ನಿರ್ಭಯವಾಗಿ ಕೆಲಸ ಮಾಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು:– ಪ್ರಶ್ನೋತ್ತರ ಕಾಲ ಮುಗಿಯಲಿ.

ಶ್ರೀ ಕೆ. ಎಸ್. ಈಶ್ವರಪ್ಪ:– ವಿಧಾನ ಸಭೆ ನಡೆಯತಕ್ಕ ಸಂದರ್ಭದಲ್ಲಿ, ಶಾಸಕರಿಗೆ ಈ ರೀತಿ ಆದರೆ, ಹೊರಗಡೆ ಗತಿ ಏನು ?

ಶ್ರೀ ವಾಟಾಳ್ ನಾಗರಾಜ್:– ಅವರು ನನ್ನನ್ನು ಹೊಡೆಯುವುದಕ್ಕೆ ಬಂದಿದ್ದಾರೆ. ನನಗೆ ರಕ್ಷಣೆ ಕೊಡಿ, ಇಲ್ಲದೇ ಹೋದರೆ, ಇವತ್ತು ನಾನು ರಾಜೀನಾಮೆ ಕೊಡುತ್ತೇನೆ. ಈ ಸದನ ಏತಕ್ಕೋಸ್ಕರ ಇರಬೇಕು.

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ:– ಗೂಂಡಾಗಿರಿ, ಈ ದೇಶದಲ್ಲಿ, ಈ ರಾಜ್ಯದಲ್ಲಿ ನಡೆಯಬೇಕೇ ಎನ್ನುವುದು ತೀರ್ಮಾನವಾಗಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ:– ಸನ್ಮಾನ್ಯ ಅಧ್ಯಕ್ಷರೇ, ಅವರ ಈ ನಡವಳಿಕೆ ಸರಿಯೇ ? ನಾವು ಯಾವ ಪ್ರಶ್ನೆ ಕೇಳಬೇಕು, ಯಾವ ಪ್ರಶ್ನೆ ಕೇಳಬಾರದು ಎಂದು ಅವರನ್ನು ಕೇಳಿ, ನಾವು ಪ್ರಶ್ನೆ ಕೇಳಬೇಕೇ ?

ಅಧ್ಯಕ್ಷರು:– ಪ್ರಶ್ನೋತ್ತರವಾದ ಮೇಲೆ ತಮ್ಮ ಪ್ರಸ್ತಾವನೆಗೆ ಅವಕಾಶ ಕೊಡುತ್ತೇನೆ, ಕುಳಿತುಕೊಳ್ಳಿ.

ಸರ್ಕಾರದಿಂದ ಜಿಲ್ಲಾ ಪರಿಷತ್ತಿನ ಅಭಿವೃದ್ಧಿ ಕಾರ್ಯಗಳಿಗೆ ಹಣ ಬಿಡುಗಡೆ

136 (467): ಶ್ರೀ ವೈ. ಕೆ. ರಾಮಯ್ಯ (ಕುಣಿಗಲ್)

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

28

LA-Vol-4